ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನವನ್ನು ಭೋಧಿಸಲಾದ ದಿನಾಂಕಃ 13.10.2025

ಪಾಟೀ ಸವಾಲು ಃ ಪ್ರತಿವಾದಿಗಳ ಪರ ಶ್ರೀ ಹೆಚ್.ಆರ್.ಎಸ್ ವಕೀಲರಿಂದ

1. ನಾನು ಎಸ್.ಎಸ್.ಎಲ್.ಸಿ ಯವರೆಗೆ ವ್ಯಾಸಂಗ ಮಾಡಿರುತ್ತೇನೆ. ಮೃತ ನಾಗೇಗೌಡರು ವಾದಿಯನ್ನು ತಮ್ಮ ಜೀವಿತ ಕಾಲದಲ್ಲಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ವಾದಿಯು ಮಾನಸಿಕವಾಗಿ ಅಸ್ವಸ್ಥಳಾಗಿರುತ್ತಾಳೆ ಎಂದರೆ ಸರಿಯಲ್ಲ. ವಾದಿಯನ್ನು ಆಸ್ಪತ್ರೆಗೆ ತೋರಿಸಲು ಆಕೆಯ ಗಂಡನ ಜೊತೆ 2ನೇ ಪ್ರತಿವಾದಿಯು ಸಹ ಹೋಗುತ್ತಿದ್ದರು ಎಂದರೆ ಸರಿಯಲ್ಲ. ವಾದಿಗೆ ಮಾನಸಿಕ ಖಾಯಿಲೆ ಇರುವ ಕಾರಣ ಆಕೆಗೆ ಯಾವುದೇ ವ್ಯವಹಾರ ಜ್ಞಾನ ಇರಲಿಲ್ಲ ಎಂದರೆ ಸರಿಯಲ್ಲ. ವಾದಿಯ ಗಂಡ ನಾಗೇಗೌಡರು 1ನೇ ಪ್ರತಿವಾದಿಯು ಬ್ಯಾಂಕಿನಲ್ಲಿ ಸುಮಾರು ಎಂಟು ಲಕ್ಷ ರೂಪಾಯಿಗಳನ್ನು ಠೇವಣಿ ಇಟ್ಟಿರುತ್ತಾರೆ. 2ನೇ ಪ್ರತಿವಾದಿಯು ನಾಗೇಗೌಡರ ಸ್ನೇಹಿತನಾಗಿದ್ದ ಕಾರಣ ಆತನ ಹೆಸರನ್ನು ನಾಮಿನಿಯಾಗಿ ಮಾಡಲಾಗಿರುತ್ತದೆ.

2. ಮೃತ ನಾಗೇಗೌಡ ಮತ್ತು 2ನೇ ಪ್ರತಿವಾದಿಯು ಒಂದೇ ಕುಟುಂಬದವರು ಎಂದರೆ ಸರಿಯಲ್ಲ. ಮೃತ ನಾಗೇಗೌಡ ಮತ್ತು 2ನೇ ಪ್ರತಿವಾದಿಯ ತಂದೆ ಸಹೋದರರಾಗಿದ್ದರು ಎಂದರೆ ಸರಿಯಲ್ಲ. ವಾದಿಯ ಗಂಡ ತನ್ನ ಜೀವಿತ ಕಾಲದಲ್ಲಿ ಕೆಪಿಟಿಸಿಎಲ್ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದರು. ವಾದಿಯ ಗಂಡ ಮತ್ತು 2ನೇ ಪ್ರತಿವಾದಿಯು ಒಂದೇ ಮನೆಯಲ್ಲಿ ವಾಸ ಇದ್ದರು ಎಂದರೆ ಸರಿಯಲ್ಲ. ದಾವೆಯನ್ನು ನಾನೇ ನನ್ನ ಅಕ್ಕಳಾದ ವಾದಿಗೆ ಮಾಹಿತಿ ನೀಡಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

3. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಸಂಗತಿಗಳು ಗೊತ್ತು. ನನ್ನ ಮುಖ್ಯ ವಿಚಾರಣೆಯ ಮತ್ತು ದಾವೆಯ ಸಂಗತಿಗಳನ್ನು ನಾನೇ ವಕೀಲರಿಗೆ ಮಾಹಿತಿ ನೀಡಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ವಾದಿಯು ನನಗೆ ಅಕ್ಕಳಾಗಬೇಕು ಎಂದು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆಯಲ್ಲಿ ತಿಳಿಸಿಲ್ಲ ಎಂದರೆ ಸರಿ. ನನಗೆ ಖಾತಾ ನಂಬರ್‌ನ್ನು ಹೇಳಲು ಬರುವುದಿಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

(ದೇವರಾಜು ಹೆಚ್.ಆರ್.)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.